**ದಿನಾಂಕಃ 21.06.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ. ಜೆ.ಆರ್.ಎಂ., ಆರೋಪಿ ಪರ ವಕೀಲರಿಂದಃ**

ನನಗೆ ಈಗ 63 ವರ್ಷ. ನಾನು ಪಿರ್ಯಾದಿ ಸಂಸ್ಥೆಯಲ್ಲಿ Accountant ಅಂತ ಕೆಲಸ ಮಾಡುತ್ತಿದ್ದೇನೆ. ಈ ರೀತಿ ಸುಮಾರು 27 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ಸಂಸ್ಥೆಯ ಲೆಕ್ಕಪತ್ರಗಳನ್ನು ಪರಿಶೀಲನೆ ಮಾಡುವ ಅಧಿಕಾರ ಇದೆ. ಒಂದು ವೇಳೆ ತಪ್ಪುಗಳು ಕಂಡುಬಂದರೆ ಅದನ್ನು ತಿದ್ದುಪಡಿ ಮಾಡುವ ಅಧಿಕಾರ ನನಗೆ ಇದೆಯಾ ಎಂದರೆ ತಪ್ಪುಗಳು ಏನು ಎಂದು ನನಗೆ ಅರ್ಥ ಆಗುತ್ತಿಲ್ಲ ಎಂದು ನುಡಿಯುತ್ತಾರೆ. ನಮ್ಮ ಸಂಸ್ಥೆಯ ಲೆಕ್ಕಪತ್ರವನ್ನು ಪ್ರತಿವರ್ಷ ಆಡಿಟ್ ಮಾಡಿಸುತ್ತೇವೆ. ನಮ್ಮ ಸಂಸ್ಥೆಯಲ್ಲಿ ಠೇವಣಿ ಇಡುವುದು ಇಲ್ಲ, ಆದರೆ ಸಾಲ ನೀಡುತ್ತೇವೆ. ಸಾಲ ನೀಡಿದಾಗ ದಾಖಲೆಯಲ್ಲಿ ನಮೂದಿಸುತ್ತೇವೆ. ನಮ್ಮ ಪ್ರೊಪ್ರೈಟರ್ ಗೆ ಪರಿಚಯ ಇರುವ ವ್ಯಕ್ತಿಗಳಿಗೆ ಸಾಲ ನೀಡುತ್ತೇವೆ. ಸಾಲ ನೀಡಿದ್ದಕ್ಕೆ ನಮ್ಮ ದಾಖಲೆಗಳಲ್ಲಿ ನಮೂದು ಮಾಡುತ್ತೇವೆ. ನಮ್ಮ ಸಂಸ್ಥೆ ನೊಂದಣಿಯಾಗಿದೆ. ನಮ್ಮ ಸಂಸ್ಥೆಯನ್ನು Money Lending ಕಾಯ್ದೆಯಡಿಯಲ್ಲಿ ನೊಂದಣಿ ಮಾಡಿಸಿದ್ದೇವೆ. ಸಾಲ ಮಂಜೂರಾತಿಯನ್ನು ನಮ್ಮ ಪ್ರೊಪ್ರೈಟರ್ ಮಂಜೂರು ಮಾಡುತ್ತಾರೆ. ಸಾಲ ನೀಡಿದ ವಿಚಾರವನ್ನು ಇಲಾಖಾ ಅಧಿಕಾರಿಗಳಿಗೆ ತಿಳಿಸುತ್ತೀರಾ ಎಂದರೆ ನಮಗೆ Money Lending ಅಧಿಕಾರಿಗಳು ಬರುತ್ತಾರೆ ಅವರಿಗೆ ತಿಳಿಸುತ್ತೇವೆ. ಅವರಿಗೆ ಮಾಹಿತಿ ಕೊಟ್ಟ ಬಗ್ಗೆ ದಾಖಲೆಯನ್ನು ನೋಡಿ ಹೇಳುತ್ತೇನೆ.

ಪಿಡಬ್ಲ್ಯೂ.1:ಶ್ರೀ. ವಿ. ರಾಧಕೃಷ್ಣನ್.,

**2.** ಈ ಪ್ರಕರಣದ ಆರೋಪಿ ನಮ್ಮ ಪ್ರೊಪ್ರೈಟರ್ ರಂಕ ರವರಿಗೆ ಸುಮಾರು 15-20 ವರ್ಷಗಳಿಂದ ಪರಿಚಯ. ಆವಾಗಿಲಿಂದ ಅವರ ಮಧ್ಯೆ ವ್ಯವಹಾರ ಇತ್ತೊ ಇಲ್ಲವೋ ಎಂದು ನೋಡಿ ಹೇಳಬೇಕಾಗುತ್ತದೆ. ಸಾಕ್ಷಿ ಸ್ವತಃ ಹೇಳುತ್ತಾರೆ ಈ ಪ್ರಕರಣ ಹೊರತುಪಡಿಸಿ ಇನ್ನು ಎರಡು ಚೆಕ್ ಬೌನ್ಸ್ ಪ್ರಕರಣ ಅವರ ಮೇಲೆ ಇದೆ ಎಂದು ನುಡಿಯುತ್ತಾರೆ. ಆರೋಪಿಗೆ ಸಾಲವನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ರೂ.15 ಲಕ್ಷ ಸಾಲ ಕೊಟ್ಟಿದ್ದೇವೆ. ರೂ.15 ಲಕ್ಷ ಸಾಲ ಕೊಟ್ಟ ವಿಚಾರ ನಮ್ಮ ಸಂಸ್ಥೆಯ ಲೆಕ್ಕಪತ್ರದಲ್ಲಿ ನಮೂದು ಮಾಡಿದ್ದೇವೆ. ಈ ರೀತಿ ಲೆಕ್ಕಪತ್ರದಲ್ಲಿ ನಮೂದು ಮಾಡಿದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸುತ್ತೇನೆ. ಆರೋಪಿಗೆ ಸಾಲವನ್ನು ಪ್ರತಿಶತ ಶೇಕಡ 16 ಬಡ್ಡಿಯಂತೆ ಕೊಟ್ಟಿದ್ದೇವೆ. ಸದರಿ ಬಡ್ಡಿ reducing balance ಇರುತ್ತದೆ. ಆರೋಪಿ ಪ್ರತಿ ತಿಂಗಳು ಬಡ್ಡಿ ಕೊಡಲಾಗುವುದಿಲ್ಲ ಎಂದು 10 ತಿಂಗಳಿಗೆ ರೂ.1,10,000/- ಚೆಕ್ಕು ಮುಖಾಂತರ ಕೊಟ್ಟಿದ್ದಾರೆ. ಬಡ್ಡಿ ಯಾವಾಗ ಯಾವಾಗ ಕೊಟ್ಟಿದ್ದಾರೆ ಎಂದು ಸ್ಟೇಟ್‌ಮೆಂಟ್ ನೋಡಿ ಹೇಳಬೇಕಾಗುತ್ತದೆ. ಸಾಕ್ಷಿ ಸ್ವತಃ ಹೇಳುತ್ತಾರೆ ರೂ.90 ಸಾವಿರ ಮತ್ತೆ ಕೊಟ್ಟಿದ್ದಾರೆ ಅದು ಸ್ಟೇಟ್‌ಮೆಂಟಿನಲ್ಲಿ ಇರುತ್ತದೆ. ಆರೋಪಿ ನಗದು ಮುಖಾಂತರ ಯಾವುದೇ ಹಣ ನಮಗೆ ಕೊಟ್ಟಿಲ್ಲ. ರೂ.15 ಲಕ್ಷಕ್ಕೆ ಈ ಪ್ರಕರಣ ಸೇರಿಸಿ ಒಟ್ಟು 4 ಪ್ರಕರಣ ದಾಖಲಿಸಿದ್ದೇನೆ. ಆರೋಪಿ ಒಟ್ಟು 10 ಚೆಕ್ಕುಗಳನ್ನು ಕೊಟ್ಟಿದ್ದರು.

**3.** ಸಾಲ ಪಡೆಯುವಾಗ ಆರೋಪಿ 10 ಚೆಕ್ಕುಗಳನ್ನು ಕೊಟ್ಟಿದ್ದರು. ದಿ.05.01.2023 ರಂದು ಸದರಿ ಚೆಕ್ಕುಗಳನ್ನು ವಾಪಸ್ ಪಡೆದು ಹೊಸದಾಗಿ ಮತ್ತೆ 10

ಚೆಕ್ಕುಗಳನ್ನು ಕೊಟ್ಟಿರುತ್ತಾರೆ. ಸಾಲ ನೀಡುವಾಗ ಆರೋಪಿ 10 ಚೆಕ್ಕುಗಳನ್ನು ಕೊಟ್ಟ ಬಗ್ಗೆ ನಾವು ಯಾವುದೇ ರಶೀದಿ ನೀಡಿಲ್ಲ. ದಿ.05.01.2023 ರಂದು ಹೊಸದಾಗಿ ಚೆಕ್ಕುಗಳನ್ನು ಪಡೆದ ಬಗ್ಗೆ ರಶೀದಿ ಪಡೆದಿಲ್ಲ. ಸಾಕ್ಷಿ ಸ್ವತಃ ಹೇಳುತ್ತಾರೆ ಪೋಸ್ಟ್ ಡೇಟೆಡ್ ಚೆಕ್ಕುಗಳು ಇದ್ದವು ಎಂದು ನುಡಿಯುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಆಲಿಸಿ ಕೊನೆಯ ಬಾರಿಗೆ ಅವಕಾಶ ನೀಡಲಾಯಿತು.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**( ಶಂಭುಲಿಂಗಯ್ಯ ಮೂಡಿಮಠ)**
ಎಸಿಎಂಎಂ ನ್ಯಾಯಾಧೀಶರು
ಲಘು ವ್ಯವಹಾರಗಳ ನ್ಯಾಯಾಲಯ
ಬೆಂಗಳೂರು.